20

# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು, ಹೊನ್ನಾವರ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48 ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂ. ಗ್ರಾಅಪ 1135 ಗ್ರಾಪಂಅ 2018, ದಿನಾಂಕ 02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ: ಬೆಂಗ್ರಾಜಿಪಂ/ಸಿ2/ದೂರು/ಸಿಆರ್-06/17-18, ದಿನಾಂಕ 17.05.2019.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂ. ಪ್ರಾಆಕ/ಅಭಿವೃದ್ಧಿ/ಸಿಆರ್/34/2019-20, ದಿನಾಂಕ 18.10.2019.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬೆಂಗಳೂರು ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು, ಹೊನ್ನಾವರ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಪುಟ್ಟಯ್ಯನ ಅಗ್ರಹಾರದ ಗ್ರಾಮದ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಕೊಠಡಿಯನ್ನು ದುರುದ್ದೇಶಪೂರಕವಾಗಿ ನೆಲಸಮಗೊಳಿಸಿರುವ ಸಂಬಂಧ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43 ರನ್ವಯ ಕ್ರಮ ಜರುಗಿಸುವ ಕುರಿತು ವರದಿಯನ್ನು ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರ.ಸಂ.(3)ರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಸಂಗಡ ವಿಚಾರಣಾ ವರದಿಯಲ್ಲಿ ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು, ಹೊನ್ನಾವರ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾ. ರವರ ಮೇಲಿರುವ ದೂರಿನ ಬಗ್ಗೆ ದಿನಾಂಕ: 15.6.2019 ರಲ್ಲಿ ಕಾರಣ ಕೇಳುವ ನೋಟೀಸ್ ನೀಡಿ 15 ದಿನಗಳೊಳಗೆ ಸಮಜಾಯಿಷಿ ನೀಡುವಂತೆ ತಿಳಿಸಲಾಗಿರುತ್ತದೆ. ನಂತರ ದಿನಾಂಕ: 30.08.2019 ಹಾಗೂ 20.09.2019 ರಂದು ಶ್ರೀ ಚನ್ನಗಂಗಯ್ಯ ರವರನ್ನು ವಿಚಾರಣೆ ಮಾಡಿ ಲಿಖಿತ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಸದರಿ ದೂರಿನ ಬಗ್ಗೆ ಅವರು ಕೊಟ್ಟ ಉತ್ತರ ಹಾಗೂ ವಿಚಾರಣೆ ವೇಳೆಯಲ್ಲಿ ಅವರು ನೀಡಿದ ಮಾಹಿತಿ ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಪುಟ್ಟಯ್ಯನ ಅಗ್ರಹಾರ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಕೊಠಡಿಯನ್ನು ನೆಲಸಮ ಮಾಡುವ ಮುನ್ನ ಕಟ್ಟಡದ ವಾಸ್ತವ ಸ್ಥಿತಿಯ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ವರದಿ ಮಾಡಿ ಅವರಿಂದ ಅನುಮತಿ ಪಡೆದು ನೆಲಸಮ ಮಾಡುವ ಕ್ರಮ ವಹಿಸಬೇಕಾಗಿರುತ್ತದೆ. ಜೊತೆಗೆ ಕಟ್ಟಡ ನೆಲಸಮ ಮಾಡಿದಾಗ ಲಭ್ಯವಿರುವ ಕೊಠಡಿಯಲ್ಲಿನ ಪೀಠೋಪಕರಣ ಹಾಗೂ ಕಿಟಕಿಗಳನ್ನು ಶಾಲೆಯ ವಶಕ್ಕೆ ನೀಡದೇ ನಿಯಮಾನುಸಾರ ಒಪ್ಪಿಗೆ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸುವಲ್ಲಿ ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು ರವರು ವಿಫಲರಾಗಿರುತ್ತಾರೆ.

ಮುಂದುವರೆದು, ಶಿಥಿಲಗೊಂಡಿದ್ದ ಹಳೆಯ ಉರ್ದು ಶಾಲೆಯ ಕಟ್ಟಡವನ್ನು ತೆರವುಗೊಳಿಸಿ ಅಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಶುದ್ಧ ನೀರು ಘಟಕ ಸ್ಥಾಪಿಸಬೇಕೆಂದು, ಗ್ರಾಮ ಪಂಚಾಯತಿಯು ಸಭಾ ನಿರ್ಣಯ ಕೈಗೊಂಡ ನಂತರ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆದ ನಂತರವಷ್ಟೆ, ಶಿಥಿಲವಾಗಿದ್ದ ಕೊಠಡಿಯನ್ನು ತೆರವುಗೊಳಿಸಲಾಗಿರುತ್ತದೆ. ದೂರಿರುವ ವ್ಯಕ್ತಿಗಳು, ಶಾಲೆಯ ಕೊಠಡಿಯನ್ನು ನೆಲಸಮಗೊಳಿಸುವ ವೇಳೆಯಲ್ಲಿಯೇ ಅದನ್ನು ತಡೆಯುವುದಾಗಲೀ ಅಥವಾ ಪೊಲೀಸ್ ಠಾಣೆಗೆ ದೂರು ನೀಡುವುದಾಗಲೀ ಮಾಡಿರುವುದಿಲ್ಲ. ತೆರವುಗೊಳಿಸಲಾಗಿರುವ ಶಾಲಾ ಕಟ್ಟಡದಲ್ಲಿ ಸುಮಾರು 20 ವರ್ಷಗಳ ಹಿಂದೆಯೇ ಶಾಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದ್ದು, 1996-97ನೇ ಸಾಲಿನಲ್ಲಿ ನಿರ್ಮಾಣಗೊಂಡಿರುವ ಕಟ್ಟಡದಲ್ಲಿ ಉರ್ದು ಶಾಲೆಯು ನಡೆಯುತ್ತಿತ್ತು. ತೆರವುಗೊಳಿಸಲಾಗಿರುವ ಕಟ್ಟಡವು 1963 ರಲ್ಲಿ ನಿರ್ಮಿಸಿದ್ದರಿಂದ ಹಳೆಯದಾಗಿರುತ್ತದೆ. ಇಂತಹ ಪಾಳು ಬಿದ್ದದ್ದ ಜಾಗದಲ್ಲಿ ಮಕ್ಕಳು ಆಟವಾಡುವ ಸಂದರ್ಭದಲ್ಲಿ ಅನಾಹುತವೇನಾದರೂ ಸಂಭವಿಸಬಹುದೆಂಬುದನ್ನು ನಿರೀಕ್ಷಿಸಿ, ಮುಂಜಾಗರೂಕತಾ ಕ್ರಮವಾಗಿ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಿಥಿಲವಾಗಿದ್ದ ಕಟ್ಟಡವನ್ನು ತೆರವುಗೊಳಿಸಲಾಗಿರುತ್ತದೆ. ಸದರಿ ಶಾಲೆಯ ಕಟ್ಟಡವು ಸುಮಾರು 60 ವರ್ಷಗಳಷ್ಟು ಹಳೆಯದಾಗಿದ್ದು, ಕೊಠಡಿಯ ಕಿಟಕಿ, ಬಾಗಿಲುಗಳು ಆದಾಗಲೇ ಹುಳುಗಳು ತಿಂದು ಬಹುತೇಕ ನಶಿಸಲ್ಪಟ್ಟಿರುವ ಸಂದರ್ಭಗಳಿರುತ್ತವೆ. ಹಾಗೂ ಸದರಿ ಕೊಠಡಿಯಲ್ಲಿ ಯಾವುದೇ ಡೆಸ್ಕ್ ಬೆಂಚ್ ಮತ್ತು ಮರಮುಟ್ಟು ಸಾಮಗ್ರಿಗಳು ಇರಲಿಲ್ಲ. ಚಪ್ಪಡಿ ಕಲ್ಲುಗಳನ್ನು ಅಲ್ಲಿಯೇ ಬಿಡಲಾಗಿರುತ್ತದೆ. ಒಟ್ಟಾರೆ, ಶಿಥಿಲಗೊಂಡಿದ್ದ ಕೊಠಡಿಯ ಕಟ್ಟಡವನ್ನು ತೆರವುಗೊಳಿಸಿದ ಸಂದರ್ಭದಲ್ಲಿ ಶಾಲೆಗೆ ಸಂಬಂಧಿಸಿದ ಯಾವುದೇ ವಸ್ತುಗಳು ಇರಲಿಲ್ಲ ಎಂಬುದನ್ನು ತಿಳಿಸಿರುತ್ತಾರೆ. ಸದರಿ ಶಾಲಾ ಕೊಠಡಿಯನ್ನು ಯಾವುದೇ ಪಾಠ ಪ್ರವಚನಗಳು ನಡೆಯುತ್ತಿರಲಿಲ್ಲ. ಸಾಮಾನ್ಯ ಸಭೆ 02/2016-17, ವಿಷಯ ಸಂ. 15, ದಿನಾಂಕ: 31.05.2016 ರಲ್ಲಿ ಸಭಾ ನಡವಳಿಯಲ್ಲಿ ಈ ವಿಷಯ ಪ್ರಸ್ತಾಪವಾಗಿರುತ್ತದೆ. ದಿನಾಂಕ: 18.06.2016 ರಂದು ಸದರಿ ಶಾಲೆಯ ಮುಖ್ಯ ಶಿಕ್ಷಕರಿಗೆ ಪತ್ರ ಬರೆದಿರುವ ದೊಡ್ಡಬಳ್ಳಾಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಕೊಠಡಿಯನ್ನು ನೆಲಸಮಗೊಳಿಸುವಂತೆ ಅನುಮತಿ ನೀಡಿರುತ್ತಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿ ಪಡೆಯದೇ ಕಟ್ಟಡವನ್ನು ತೆರವುಗೊಳಿಸಿರುವುದು ಕಾನೂನುಬಾಹಿರವಾಗಿರುವುದರಿಂದ ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು ರವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸಬಹುದಾಗಿರುತ್ತದೆ ಎಂದು ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ರಲ್ಲಿ ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು, ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವರ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರ ಅಲಕ್ಷ್ಯತೆ ತೋರುತ್ತಿರುವುದಕ್ಕಾಗಿ ಅಥವಾ ದುರ್ನಡತೆಯಿಂದ ತಪ್ಪಿತಸ್ಥನಾಗಿರುವುದಕ್ಕಾಗಿ ಸರ್ಕಾರವು ಆ ಹುದ್ದೆಯಿಂದ ತೆಗೆದುಹಾಕಬಹುದಾಗಿದೆ ಮತ್ತು ಅಧ್ಯಕ್ಷ ಹುದ್ದೆಯಿಂದ ತೆಗೆದುಹಾಕಲ್ಪಟ್ಟವರನ್ನು ಗ್ರಾಮ ಪಂಚಾಯತಿಯ ಸದಸ್ಯತ್ವದಿಂದ ತೆಗೆದುಹಾಕಬಹುದಾಗಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಕರಣದಲ್ಲಿ ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು, ಹೊನ್ನಾವರ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿ ಪಡೆಯದೆ ಪುಟ್ಟಯ್ಯನ ಅಗ್ರಹಾರದ ಗ್ರಾಮದ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಕೊಠಡಿಯನ್ನು ದುರುದ್ದೇಶಪೂರಕವಾಗಿ ನೆಲಸಮಗೊಳಿಸಿರುವುದು ಕಾನೂನುಬಾಹಿರವಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 48(5) ರನ್ವಯ ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು, ಗ್ರಾಮ ಪಂಚಾಯತಿ, ಹೊನ್ನಾವರ, ದೊಡ್ಡಬಳ್ಳಾಪುರ

ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಹೊನ್ನಾವರ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/993/ಗ್ರಾಪಂಅ/2019**
**ಬೆಂಗಳೂರು, ದಿನಾಂಕ:20.12.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 48(5) ರನ್ವಯ ಶ್ರೀ ಚನ್ನಗಂಗಯ್ಯ, ಅಧ್ಯಕ್ಷರು, ಹೊನ್ನಾವರ, ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಹೊನ್ನಾವರ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

20/12/19
(ರಮೇಶ್.ಡಿ.ಓ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾ.ಪಂ.) (ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ:**

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊನ್ನಾವರ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5) ಸಂಬಂಧಿಸಿದವರಿಗೆ-ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು ಇವರ ಮುಖಾಂತರ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
7) ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.